ಶ್ರೀ ಎಸ್.ಎಂ.ಕೃಷ್ಣ: ನಾವು ಮಾಡತಕ್ಕಂಥ ಸಮಿತಿ ಮನಿಲೆಂಡಿಂಗ್ ಆಕ್ಟ್‌ನ್ನೂ ಕೂಡ ಪರಿಶೀಲನೆ ಮಾಡುತ್ತದೆ.

ಈ) ಬಾಬುರಾವ್ ದೇಶಪಾಂಡೆ ಸ್ಮಾರಕ ಟ್ರಸ್ಟ್ ಸಂಸ್ಥೆಯ ಪರವಾಗಿ ಬೆಂಗಳೂರು ಮಹಾನಗರ ಪಾಲಿಕೆಯ ಹೆಚ್ಚುವರಿ ಪ್ರದೇಶವನ್ನು ಮಂಜೂರಾತಿಗೊಳಿಸಿ ಅಕ್ರಮವಾಗಿ ಕಟ್ಟಿದ ಕಟ್ಟಡವನ್ನು ಸಕ್ರಮಗೊಳಿಸಿರುವುದು.

ಶ್ರೀ ಯು.ಆರ್.ಸಭಾಪತಿ(ಉಡುಪಿ): ಮಾನ್ಯ ಅಧ್ಯಕ್ಷರೆ, ಬೆಂಗಳೂರು ನಗರದ ಮಲ್ಲೇಶ್ವರಂ 11ನೇ ಕ್ರಾಸ್‌ನಲ್ಲಿರತಕ್ಕಂಥ ಬಾಬುರಾವ್ ದೇಶಪಾಂಡೆ ಟ್ರಸ್ಟ್‌ನವರಿಗೆ ಬೆಂಗಳೂರು ಮಹಾನಗರ ಪಾಲಿಕೆಯವರು 3,954 ಚದರ ಅಡಿ ಹಾಗೂ 1977 ಚದರ ಅಡಿ ನೆಲ ಅಂತಸ್ತಿಗೆ ವಾಹನ ನಿಲುಗಡೆ ಮಾಡಲು ಅನುಮತಿ ಕೊಟ್ಟಿದೆ. ಹಾಗೆಯೇ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ನಿಯಮಗಳೆಲ್ಲವನ್ನು ಬದಿಗೊತ್ತಿ 12645 ಚದರ ಅಡಿ ಕಟ್ಟಡವನ್ನು ನಿರ್ಮಾಣ ಮಾಡಿದ್ದಾರೆ.

ಶ್ರೀ ಎಸ್.ಎಂ.ಕೃಷ್ಣ(ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಒಂದು ಪ್ರಶ್ನೆಯನ್ನು ಪ್ರಸ್ತಾಪ ಮಾಡಿ ಈ ಸದನದ ಗಮನ ಸೆಳೆಯುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಇದು ಕೋರ್ಟ್‌ನಲ್ಲಿರತಕ್ಕಂಥ ವಿಚಾರವಾಗಿದೆ. ಆದ್ದರಿಂದ ಇದರ ಬಗ್ಗೆ ವಿಶ್ಲೇಷಣೆ ಮಾಡುವಂಥಾದ್ದು ಅಷ್ಟೊಂದು ಸಾಧುವಲ್ಲ. ಸುದ್ದಿ ಮಾಧ್ಯಮಗಳಲ್ಲಿ ಬರತಕ್ಕಂಥಾದ್ದು ಮತ್ತು ಶಾಸನಸಭೆಯಲ್ಲಿ ಇದರ ಬಗ್ಗೆ ಇಂಟರ್‌ವೆನ್‌ಷನ್ ಮಾಡತಕ್ಕಂಥಾದ್ದಕ್ಕೆ ಬಹಳ ವ್ಯತ್ಯಾಸ ಇದೆ. ಆದ್ದರಿಂದ ಈ ವಿಷಯದ ಬಗ್ಗೆ ನ್ಯಾಯಾಲಯ ಈಗಾಗಲೇ ಗಮನಿಸಿರುವುದರಿಂದ ಇದನ್ನು ಇಲ್ಲಿಗೆ ಬಿಟ್ಟುಬಿಡುವುದು ಒಳ್ಳೆಯದೆಂದು ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಉ) ರಾಜ್ಯದಲ್ಲಿ ನಕಲಿ ಛಾಪಾ ಕಾಗದಗಳ ಮಾರಾಟ.

+ ಶ್ರೀ ಬಿ.ಸೋಮಶೇಖರ್(ಮಳವಳ್ಳಿ): ಮಾನ್ಯ ಸಭಾಧ್ಯಕ್ಷರೆ, ನಮ್ಮ ರಾಜ್ಯದಲ್ಲಿ ನಕಲಿ ಛಾಪಾ ಕಾಗದಗಳ ಹಾವಳಿ ನಿರಂತರವಾಗಿ ನಡೆಯುತ್ತಿರುವುದನ್ನು ಸರ್ಕಾರವೇ ಒಪ್ಪಿಕೊಂಡಿದೆ. ಹಾಗೆಯೇ ಈ ವಿಷಯ ಈಗಾಗಲೇ ಅನೇಕ ಪತ್ರಿಕೆಗಳಲ್ಲಿಯೂ ಸಹ ಬಂದಿದೆ. ಮೊನ್ನೆತಾನೆ ಭದ್ರಾವತಿಯಲ್ಲಿ ವಿಜಾನೆಯಿಂದಲೇ ಛಾಪಾಕಾಗದಗಳನ್ನು ಸ್ಟಾಂಪ್ ವೆಂಡರ್‌ಗಳಿಗೆ ಕೊಟ್ಟಿದ್ದಾರೆಂದು ಧೃಡಪಟ್ಟಿದೆ. ಇದನ್ನು ಅಧಿಕಾರಿಗಳೂ ಸಹ